# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ: 24-12-2012 ರಂದು ನಡೆದ ಸಭೆಯ ನಡವಳಿಗಳು.

| **ಹಾಜರಿದ್ದ ಸದಸ್ಯರು** | | **ಹಾಜರಿದ್ದ ಅಧಿಕಾರಿಗಳು** |
|---|---|---|
| **ಶ್ರೀಯುತರುಗಳಾದ:** | | |
| ಶ್ರೀ.ಎಸ್.ವೆಂಕಟೇಶ್ ಬಾಬು | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| ಡಾ॥ ಎಂ.ಎಸ್. ಶಿವಪ್ರಸಾದ್ | ಸದಸ್ಯರು | ಅಪರ ಆಯುಕ್ತರು (ಬೊಮ್ಮನಹಳ್ಳಿ) |
| ಶ್ರೀ.ಅನಿಲ್ ಕುಮಾರ್ ಎಸ್. | ಸದಸ್ಯರು | ಜಂಟಿ ಆಯುಕ್ತರು (ದಾಸರಹಳ್ಳಿ) |
| ಶ್ರೀ.ಜಿ.ಮಂಜುನಾಥ್ | ಸದಸ್ಯರು | ಜಂಟಿ ಆಯುಕ್ತರು (ಪೂರ್ವ) |
| ಶ್ರೀಮತಿ.ರೂಪಾದೇವಿ | ಸದಸ್ಯರು | ಜಂಟಿ ಆಯುಕ್ತರು (ಮಹದೇವಪುರ) |
| ಶ್ರೀಮತಿ.ಶ್ರೀವಿದ್ಯಾ ಎನ್. | ಸದಸ್ಯರು | ಕಾರ್ಯಪಾಲಕ ಅಭಿಯಂತರರು (ಪೂರ್ವ) |
| ಶ್ರೀಮತಿ.ದೇವಿಕಾ ರಾಣಿ ಶ್ರೀಧರ್ | ಸದಸ್ಯರು | ಅಧೀಕ್ಷಕ ಅಭಿಯಂತರರು (ಬೊಮ್ಮನಹಳ್ಳಿ) |
| ಶ್ರೀಮತಿ.ಫೌಜೀಯ ಬೇಗಂ | ಸದಸ್ಯರು | |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

1. **ವಿಷಯದ ಸಂಖ್ಯೆ: ಸಾಆಸ್ಥಾಸ/21/2012-13:**

ಸಂಖ್ಯೆ: ಆ/ಪಿಎಸಾರ್(ಜಿ)/ /2012-13, ದಿನಾಂಕ: 22-11-2012 ರ ಆಯುಕ್ತರು ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮಂಡೂರು ಸರ್ವೆ ನಂ.155 ರ ಉತ್ತರ ಭಾಗದಲ್ಲಿ ಬಿಓಟಿ ಆಧಾರದಲ್ಲಿ ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕ ಸ್ಥಾಪಿಸಲು ಮೆ॥ ಆರ್ಗ್ಯಾನಿಕ್ ವೇಸ್ಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯೊಂದಿಗೆ ದಿನಾಂಕ: 31-08-2009 ರಲ್ಲಿ ಕರಾರನ್ನು ಮಾಡಿಕೊಳ್ಳಲಾಗಿತ್ತು.

ಕರಾರಿನಂತೆ ಸದರಿ ಸಂಸ್ಥೆಗೆ ಪಾಲಿಕೆಯಿಂದ 25 ಎಕರೆ ಪ್ರದೇಶವನ್ನು 20 ವರ್ಷಗಳ ಅವಧಿಗೆ ಗುತ್ತಿಗೆ (Lease) ಆಧಾರದ ಮೇಲೆ ಒದಗಿಸಬೇಕಾಗಿತ್ತು.

ಕರಾರಿನಂತೆ ಸದರಿ ಸಂಸ್ಥೆಯು ಒಪ್ಪಿಗೆ ಪತ್ರ (Letter of acceptance) ಪಡೆದ ದಿನಾಂಕದಿಂದ 450 ದಿನಗಳೊಳಗೆ (15 ತಿಂಗಳ ಕಾಲಾವಧಿ) ಘಟಕ ಸ್ಥಾಪನೆ ಪೂರ್ಣಗೊಳಿಸಿ ಕಾರ್ಯಾರಂಭ ಮಾಡಬೇಕಿತ್ತು.

ಘಟಕ ಸ್ಥಾಪನೆಗೆ ಅವಶ್ಯವಿರುವ 25 ಎಕರೆ ಪ್ರದೇಶವನ್ನು ಪಾಲಿಕೆಯಿಂದ ಹಸ್ತಾಂತರಿಸಿ, ದಿನಾಂಕ: 17-05-2010 ರಂದು ಲೀಸ್ ಅನ್ನು ನೊಂದಾಯಿಸಲಾಗಿರುತ್ತದೆ.

ಸದರಿ ದಿನಾಂಕದಿಂದ ಈವರೆಗೆ, ಸುಮಾರು 60-70 ಮೀ. ಕಾಂಪೌಂಡ್ ನಿರ್ಮಾಣದ ಹೊರತು ಇತರೆ ಯಾವುದೇ ಚಟುವಟಿಕೆಗಳನ್ನು ಕೈಗೊಳ್ಳದೆ ಹಾಗೂ ಸ್ಥಳೀಯ ಗ್ರಾಮ ಪಂಚಾಯಿತಿಯಿಂದ ತೀರುವಳಿ ಪಡೆಯದೆ ಇದ್ದುದರಿಂದ ಸದರಿ ಸಂಸ್ಥೆಗೆ ಈ ಬಗ್ಗೆ ಹಲವಾರು ನೋಟೀಸ್‌ಗಳನ್ನು ನೀಡಿದರೂ ಸ್ಪಂದಿಸದ ಕಾರಣ ಉಲ್ಲೇಖ-(1) ರ ದಿನಾಂಕ: 16-02-2012 ರಲ್ಲಿ ಅಂತಿಮ ನೋಟೀಸ್ ಜಾರಿಗೊಳಿಸಿ, ಸದರಿ ಸಂಸ್ಥೆಯೊಂದಿಗೆ ಮಾಡಿಕೊಂಡಿದ್ದ ಕರಾರನ್ನು ರದ್ದುಗೊಳಿಸಲು ಪ್ರಸ್ತಾವನೆಯನ್ನು ಟಿಪ್ಪಣಿಯೊಂದಿಗೆ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಗೆ ಸಲ್ಲಿಸಲಾಗಿತ್ತು.

S. Venkatesh Babu
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ವಿಷಯದ ಸಂಖ್ಯೆ: 21/12-13, ದಿನಾಂಕ: 16-07-2012 ರ ನಿರ್ಣಯದಲ್ಲಿ ಕಡತವನ್ನು ಪುನರ್ ಪರಿಶೀಲಿಸಿ ಮರು ಮಂಡಿಸಲು ತೀರ್ಮಾನಿಸಿರುತ್ತದೆ.

ಏತನ್ಮಧ್ಯೆ ಸದರಿ ಸಂಸ್ಥೆಯ ಬೆಂಗಳೂರು ಪ್ರತಿನಿಧಿಯು ದಿನಾಂಕ: 23-07-2012 ರಂದು ಮುಖ್ಯ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ ಮತ್ತು ಕಾರ್ಯಪಾಲಕ ಅಭಿಯಂತರರು-2, ಘನತ್ಯಾಜ್ಯ ನಿರ್ವಹಣೆ ರವರನ್ನು ಹಾಗೂ ದಿನಾಂಕ: 25-07-2012 ರಂದು ಹಿಂದಿನ ಆಯುಕ್ತರನ್ನು ಭೇಟಿ ಮಾಡಿ, ವಿದ್ಯುತ್ ಘಟಕ ಸ್ಥಾಪನೆಯ ಯೋಜನೆಯನ್ನು ಆದ್ಯತೆ ಮೇಲೆ ಹಿಂದಿನ ಕರಾರಿನ ಅಡಿಯಲ್ಲಿಯೇ ಕೈಗೊಳ್ಳುವುದಾಗಿ ಅದಕ್ಕೆ ಪೂರಕವಾಗಿ ಈಗಾಗಲೇ ಸ್ಥಳೀಯ ಗ್ರಾಮ ಪಂಚಾಯಿತಿಯಿಂದ ಅನುಮತಿ ಪತ್ರ ಸಹ ಪಡೆದಿರುವುದಾಗಿ ತಿಳಿಸಿ, ಉದ್ದೇಶಿತ ಕರಾರಿನ ರದ್ದನ್ನು ಕೈಬಿಟ್ಟು ಒಂದು ಅವಕಾಶ ನೀಡಬೇಕೆಂದು ಕೋರಿ, ಪೂರಕವಾಗಿ ಪರಿಷ್ಕೃತ ಕಾರ್ಯಕ್ರಮ ಪಟ್ಟಿಯನ್ನು ಅನುಮೋದನೆಗಾಗಿ ಸಲ್ಲಿಸಿದ್ದರು.

ಸದರಿ ಸಂಸ್ಥೆಯವರು ಈ ಹಿಂದೆ ಸಲ್ಲಿಸಿದ್ದ ಪರಿಷ್ಕೃತ ಕಾರ್ಯಕ್ರಮ ಪಟ್ಟಿಯು ಕೆಳಗಿನಂತಿರುತ್ತದೆ.

| Sl. No. | Execution of work | Duration |
|---|---|---|
| 1 | Project start & completion | |
| 2 | **Preliminary activities**<br>Site clearance, compound wall, statutory clearances, financial closer, venders selection | 90 days |
| 3 | **Procurement activities**<br>Order placement for equipments, construction materials E & I materials for execution | 180 days |
| 4 | **Civil work at site**<br>Construction of major and minor units | 180 days |
| 5 | **Erection and implementation**<br>Of major equipments and instruments | 30 days |
| 6 | **Electrical, instrumentation and mechanical works** | 30 days |
| 7 | **Trial rum and commissioning** | 30 days |
| | **Total** | **540 days** |

- ಪರಿಷ್ಕೃತ ಕಾರ್ಯಕ್ರಮ ಪಟ್ಟಿಯಂತೆ ಘಟಕ ಸ್ಥಾಪನೆಯ ಪ್ರಗತಿಯನ್ನು ನಿಯಮಿತವಾಗಿ ಪರಿಶೀಲಿಸಬಹುದೆಂದು.
- ಪ್ರಥಮ ಹಂತದಲ್ಲಿ 15 (ಹದಿನೈದು) ಎಕರೆ ಪ್ರದೇಶದಲ್ಲಿ 600 ಮೆ.ಟನ್ ಘನತ್ಯಾಜ್ಯವನ್ನು ಪ್ರತಿದಿನ ಸಂಸ್ಕರಿಸುವ ಘಟಕವನ್ನು ಮೇಲೆ ವಿವರಿಸಿರುವ ಕಾರ್ಯಕ್ರಮ ಪಟ್ಟಿಯಂತೆ 540 ದಿನಗಳ (18 ತಿಂಗಳು) ಅವಧಿಯಲ್ಲಿ ಪೂರ್ಣಗೊಳಿಸುವುದಾಗಿ.
- ಉಳಿದ 400 ಮೆ.ಟನ್ ಘನತ್ಯಾಜ್ಯವನ್ನು ಸಂಸ್ಕರಿಸಿ ವಿದ್ಯುತ್ ಉತ್ಪಾದಿಸುವ ಘಟಕವನ್ನು (ವಿಸ್ತರಣೆ) ಮುಂದಿನ 540 ದಿನಗಳ (18 ತಿಂಗಳು) ಅವಧಿಯಲ್ಲಿ ಕೈಗೊಳ್ಳುವುದಾಗಿ.
- ಮಧ್ಯಂತರ ಕ್ರಮವಾಗಿ 120 ದಿನಗಳ (04 ತಿಂಗಳು) ಅವಧಿಯೊಳಗೆ (ಫೆಬ್ರವರಿ-2013) 300 ಮೆ. ಟನ್ ಘನತ್ಯಾಜ್ಯವನ್ನು ಸ್ವೀಕರಿಸಿ ಏರೋಬಿಕ್ ಸಂಸ್ಕರಣೆ ಮಾಡುವುದಾಗಿ.
- ಈ ಮಧ್ಯಂತರ ಕ್ರಮವಾಗಿ 120 ದಿನಗಳ (ನಾಲ್ಕು ತಿಂಗಳು) ನಂತರ ಪ್ರತಿದಿನ ಸ್ವೀಕರಿಸುವ 300 ಮೆ. ಟನ್ ಪ್ರಮಾಣಕ್ಕೆ, ಮೂಲ ಕರಾರಿನಂತೆ ಪ್ರತಿ ಟನ್‌ಗೆ ಪಾಲಿಕೆಗೆ ಪಾವತಿಸಲು ಒಪ್ಪಿರುವ ರೂ.27/- ಮೊಬಲಗನ್ನು ಅನ್ವಯಿಸಲಾಗುವುದಿಲ್ಲವೆಂದು.
- ಈಗಾಗಲೇ ನೀಡಿರುವ ರೂ.25.00 ಲಕ್ಷಗಳ ಬ್ಯಾಂಕ್ ಗ್ಯಾರೆಂಟಿ ಜೊತೆಗೆ ಕಾರ್ಪೋರೇಟ್ ಗ್ಯಾರಂಟಿಯನ್ನು ಸಹ ನೀಡಲು ಇಚ್ಛಿಸಿರುವುದಾಗಿ.

ಅಧ್ಯಕ್ಷರು

ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಮೇಲಿನ ಎಲ್ಲ ಅಂಶಗಳನ್ನು ಪರಿಗಣಿಸಿ, ಪರಿಷ್ಕೃತ ಕಾರ್ಯಕ್ರಮ ಪಟ್ಟಿಗೆ ಅನುಮೋದನೆ ನೀಡಿ, ವೇಳಾಪಟ್ಟಿಯಂತೆ ದಿನಾಂಕ: 24-08-2012 ರಿಂದ ದಿನಾಂಕ: 28-02-2014 ರ 540 (18 ತಿಂಗಳು) ಅವಧಿಯೊಳಗೆ ಮೊದಲ ಹಂತದ 600 ಮೆ. ಟನ್ ಘನತ್ಯಾಜ್ಯ ಸ್ವೀಕರಿಸಿ ಸಂಸ್ಕರಿಸುವ ಘಟಕ ಸ್ಥಾಪನೆಗೆ ಅನುವಾಗುವಂತೆ ಅನುಮತಿ ನೀಡಲು ಕೋರಿದ್ದರು.

ಈ ಮಧ್ಯೆ, ಘನತ್ಯಾಜ್ಯ ನಿರ್ವಹಣೆಯ ಬಗ್ಗೆ ದಾಖಲಾಗಿರುವ ಸಂಖ್ಯೆ: 30450/2012 ಗೆ ಸಂಬಂಧಿಸಿದಂತೆ ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿರುವ ಸಂದರ್ಭದಲ್ಲಿ ಮೆ|| ಆರ್ಗ್ಯಾನಿಕ್ ವೇಸ್ಟ್ ಇಂಡಿಯ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರು Implead ಆಗಿ, ಘಟಕ ಸ್ಥಾಪನೆಗೆ ಮತ್ತೊಂದು ಅವಕಾಶ ನೀಡಲು ಕೋರಿರುತ್ತಾರೆ.

ಪೂರಕವಾಗಿ ಈ ಹಿಂದೆ ದಿನಾಂಕ: 25-07-2012 ರಂದು ನೀಡಿದ್ದ ಪರಿಷ್ಕೃತ ಕಾರ್ಯಕ್ರಮ ಪಟ್ಟಿಯನ್ನು ಮತ್ತೆ ಪರಿಷ್ಕರಿಸಿ ಅನುಷ್ಠಾನ ಕಾರ್ಯಕ್ರಮದ ಅವಧಿಯನ್ನು ಈ ಹಿಂದೆ ನೀಡಿದ್ದ 540 ಮತ್ತು 540 ದಿನಗಳಿಗೆ ಬದಲಾಗಿ 453 ಮತ್ತು 450 ದಿನಗಳಿಗೆ ಕಡಿಮೆಗೊಳಿಸಿ ದಿನಾಂಕ: 15-10-2012 ಮತ್ತು ದಿನಾಂಕ: 03-11-2012 ರ ಪತ್ರಗಳಲ್ಲಿ, ಈ ಕೆಳಕಂಡ ಅಂಶಗಳನ್ನು ವಿವರಿಸಿರುತ್ತಾರೆ.

a) Manage the existing garbage lying on the land;
b) Revised Schedule of implementation Proposed;

1. To set up an aerobic treatment facility for treating 300 TPD of MSW within 04 months from the date of receipt of approval of revised schedule of implementation proposed hereby.
2. To treat 600 TPD of MSW facility through biomethanation in 15 acres of land in the first phase within 453 working days from date of receipt of approval of revised schedule of
3. **Implementation proposed as follows:**

| Sl. No. | Execution of Work | Duration |
|---|---|---|
| 1 | **<u>Preliminary Activities</u>**<br>Site clearance, compound wall, statutory clearance, financial closure, vendor selection | 90 working days |
| 2 | **<u>Procurement Activities</u>**<br>Order Placement for equipments, construction materials, E & I materials for execution | 120 working days |
| 3 | **<u>Civil work at site</u>**<br>Construction of major and minor units | 180 working days |
| 4 | Erection & Implementation | 60 working days |
| 5 | Electrical, Instrumentation & mechanical works | 30 working days |
| 6 | Trail run & commissioning | 33 working days |
| | **Total** | **453 days** |

1. To treat 400 TPD of MSW facility through biomethanation in 10 acres of land in the second phase within 450 working days from date of completion of the first phase; and

2. Continue to treat 300 TPD of MSW during the implementation period of the project.

ಮೇಲಿನಂತೆ ವಿವರಿಸುತ್ತ, ಸದರಿ ಸಂಸ್ಥೆಯು ಈ ಕೆಳಗಿನಂತೆ ಪಾಲಿಕೆಯ ಅನುಮೋದನೆ ಕೋರಿರುತ್ತದೆ.

1. Approval to the revised schedule of implementation proposed as per Annexure-1.

2. Directions to stop dumping further MSW on the land allocated to us with immediate effect.

S. Vasanth Kumar

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

3. BBMP's Commitment to supply MSW at the site as per the terms of the revised schedule implementation and in line with the concession Agreement for the concession period.

ಮೇಲಿನ ಹಿನ್ನೆಲೆಯಲ್ಲಿ ಮೆ॥ ಆರ್ಗ್ಯಾನಿಕ್ ವೇಸ್ಟ್ ಇಂಡಿಯ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರೊಂದಿಗೆ ಈಗಾಗಲೇ ಮಾಡಿಕೊಂಡಿರುವ ಕರಾರನ್ನು ಮುಂದುವರೆಸಿ, ಸದರಿ ಸಂಸ್ಥೆ ಸಲ್ಲಿಸಿರುವ ಪರಿಷ್ಕೃತ ಕಾರ್ಯಕ್ರಮ ಪಟ್ಟಿಗೆ ಅನುಮೋದನೆ ನೀಡುವ ಬಗ್ಗೆ ಹಾಗೂ ಈ ಉದ್ದೇಶಕ್ಕಾಗಿ ಈಗಾಗಲೇ ಗುರುತಿಸಿರುವ ಜಾಗವನ್ನು ಹಸ್ತಾಂತರಿಸುವ ಬಗ್ಗೆ ಮತ್ತು ಘನತ್ಯಾಜ್ಯವನ್ನು (MSW) ಒದಗಿಸುವ ಬಗ್ಗೆ ಈ ಕೆಳಗಿನ ಅಂಶಗಳಿಗೆ ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಮುಂದೆ ಟಿಪ್ಪಣಿ ಮಂಡಿಸಲಾಗಿದೆ.

1. ಮೆ॥ ಆರ್ಗ್ಯಾನಿಕ್ ವೇಸ್ಟ್ ಇಂಡಿಯ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯೊಂದಿಗೆ ದಿನಾಂಕ: 31-08-2009 ರಂದು ಪಾಲಿಕೆ ಮಾಡಿಕೊಂಡಿರುವ ಕರಾರನ್ನು ಮುಂದುವರೆಸಲು ಅನುಮೋದನೆ.

2. ಸದರಿ ಸಂಸ್ಥೆ ಸಲ್ಲಿಸಿರುವ ಮೊದಲನೆ ಹಂತದ 453 ದಿನಗಳ ಪರಿಷ್ಕೃತ ಕಾರ್ಯಕ್ರಮ ಪಟ್ಟಿಗೆ ಅನುಮೋದನೆ.

3. 600 (ಆರುನೂರು) ಮೆ.ಟನ್ ಸಂಸ್ಕರಣೆಯ ಮೊದಲನೇ ಹಂತದ ಘಟಕವನ್ನು, 453 ಕಾಲಾವಧಿಯೊಳಗೆ, ಸರ್ವೆ ನಂ.155 ರ ಮಂಡೂರು ಉತ್ತರದ 15 (ಹದಿನೈದು) ಎಕರೆ ಪ್ರದೇಶದಲ್ಲಿ ಪೂರ್ಣಗೊಳಿಸಲು ಅನುಮತಿ ನೀಡಲು ಅನುಮೋದನೆ.

4. ಮಧ್ಯಂತರ ಕ್ರಮವಾಗಿ 120 ದಿನಗಳ (04 ತಿಂಗಳು) ಅವಧಿಯೊಳಗೆ, ಪ್ರತಿದಿನ 300 ಮೆಟ್ರಿಕ್ ಟನ್ ಘನತ್ಯಾಜ್ಯವನ್ನು ಪಾಲಿಕೆಯಿಂದ ಸ್ವೀಕರಿಸಿ ಸಂಸ್ಕರಿಸಲು ಸದರಿ ಸಂಸ್ಥೆಗೆ ಅನುಮತಿ ನೀಡಲು ಅನುಮೋದನೆ.

5. ಸರ್ವೆ ನಂ.155 ರ ಮಂಡೂರು ಉತ್ತರದ ಮೊದಲನೆ ಹಂತದ ಘಟಕ ಸ್ಥಾಪನೆಯ ನಂತರ, 10 ಎಕರೆ (ಹತ್ತು) ಪ್ರದೇಶದಲ್ಲಿ 400 ಮೆಟ್ರಿಕ್ ಟನ್ ಸಂಸ್ಕರಣೆ ಸಾಮರ್ಥ್ಯದ ಘಟಕ ವಿಸ್ತರಣೆಯನ್ನು ಮುಂದಿನ 450 ಅವಧಿಯೊಳಗೆ ಅನುಷ್ಠಾನಗೊಳಿಸಲು ಅನುಮೋದನೆ.

6. ಸದರಿ ಸಂಸ್ಥೆ ಈಗಾಗಲೇ ನೀಡಿರುವ ರೂ.25.00 ಲಕ್ಷಗಳ Performance security ಜೊತೆಗೆ, ಕಾರ್ಪೋರೇಟ್ ಸೆಕ್ಯೂರಿಟಿ ಒದಗಿಸಲು ಹಾಗೂ ಹೆಚ್ಚುವರಿ 1.00 ಕೋಟಿ ರೂ. ಗಳ Performance security ಅನ್ನು ಬ್ಯಾಂಕ್ ಗ್ಯಾರೆಂಟಿ ರೂಪದಲ್ಲಿ ಮೆ॥ ಆರ್ಗ್ಯಾನಿಕ್ ವೇಸ್ಟ್ ಇಂಡಿಯ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯಿಂದ ಪಡೆಯಲು ಅನುಮೋದನೆ.

7. ಸ್ಥಳೀಯರ ವಿರೋಧ / ಪ್ರತಿಭಟನೆಯಿಂದಾಗಿ ಘನತ್ಯಾಜ್ಯವನ್ನು ಸದರಿ ಸಂಸ್ಥೆ ಘಟಕಕ್ಕೆ ಪಾಲಿಕೆಯಿಂದ ಒದಗಿಸಲು ಸಾಧ್ಯವಾಗದಿದ್ದಲ್ಲಿ, ಸದರಿ ಸಂಸ್ಥೆಯೇ ಘನತ್ಯಾಜ್ಯವನ್ನು ಒದಗಿಸಿಕೊಳ್ಳಲು ಅನುಮೋದನೆ.

ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಮಾನ್ಯ ಆಯುಕ್ತರ ದಿನಾಂಕ: 22-11-2012 ರ ಟಿಪ್ಪಣಿಯನ್ನು ಮಾರ್ಪಡಿಸುತ್ತಾ, ಕ್ರಮ ಸಂಖ್ಯೆ: 6 ರಲ್ಲಿ ನಮೂದಿಸಿರುವ ಹೆಚ್ಚುವರಿ ರೂ. ಒಂದು ಕೋಟಿಗಳ Performance Security ಯ ಬದಲಾಗಿ ರೂ.ಇಪ್ಪತ್ತೈದು ಲಕ್ಷಗಳ**

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

**Performance Security** ಅನ್ನು ಬ್ಯಾಂಕ್ ಗ್ಯಾರಂಟಿ ರೂಪದಲ್ಲಿ ಪಡೆಯಲು ಹಾಗೂ ಕ್ರಮ ಸಂಖ್ಯೆ. 7ನ್ನು ಕೈಬಿಡುವುದೆಂದು ಸಮಿತಿಯು ತೀರ್ಮಾನಿಸಿತು ಮತ್ತು ಈ ಮಾರ್ಪಾಡುಗಳೊಂದಿಗೆ ಆಯುಕ್ತರ ಟಿಪ್ಪಣಿಯನ್ನು ಒಪ್ಪಲಾಯಿತು.

**2. ವಿಷಯದ ಸಂಖ್ಯೆ: ಸಾಆಸ್ಥಾಸ/63/2012-13:**

ಸಂಖ್ಯೆ: ಮು.ಆ.ಅ./ಎಸಿಟಿ/2/ಎಂಸಿ/31/09-10, ದಿನಾಂಕ: 19-11-2012 ರ ವಿಶೇಷ ಆಯುಕ್ತರು ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, 06 ರೆಫರಲ್ ಆಸ್ಪತ್ರೆಗಳು ಮತ್ತು 24 ಹೆರಿಗೆ ಆಸ್ಪತ್ರೆಗಳ ಸ್ವಚ್ಛತಾ ಸೇವೆಯ ಗುತ್ತಿಗೆಯನ್ನು ದಿನಾಂಕ: 15-12-2009 ರಿಂದ 02 ವರ್ಷ ಅವಧಿಗೆ **ಮೆ॥ ನೀಲಾಂಜನ ಎಂಟರ್ ಪ್ರೈಸಸ್** ರವರಿಗೆ ನೀಡಿದ್ದು, ಸದರಿ ಗುತ್ತಿಗೆ ದಿನಾಂಕ: 14-10-2011 ರಲ್ಲಿ ಮುಕ್ತಾಯವಾದ ನಂತರ ಮತ್ತೊಂದು ವರ್ಷಕ್ಕೆ ಅಂದರೆ ದಿನಾಂಕ: 14-12-2012 ರ ವರೆಗೆ ಮುಂದುವರಿಸಲಾಗಿರುತ್ತದೆ.

ಆಸ್ಪತ್ರೆಗಳಲ್ಲಿ ಸ್ವಚ್ಛತಾ ಸೇವೆ ನಿರ್ವಹಿಸಲು ಆಯಾ ಕಾರ್ಮಿಕರಿಗೆ **ಸರ್ಕಾರದ ಕನಿಷ್ಠ ವೇತನ ನಿಯಮಾವಳಿ ರೀತ್ಯಾ ವೇತನ ಪಾವತಿಸಬೇಕಾಗಿದ್ದು,** ದಿನಾಂಕ: 01-04-2012 ರಿಂದ ಸದರಿ ವೇತನ ಪರಿಷ್ಕರಣೆಗೊಂಡಿರುತ್ತದೆ. ವೇತನ ಪರಿಷ್ಕರಣೆಗೊಂಡಿರುವ ರೀತ್ಯ ಹೆಚ್ಚುವರಿ ವೇತನ ಪಾವತಿಸಬೇಕಾಗಿರುತ್ತದೆ. (Vide Notification No.KAE18/LMW2008, Dated: 18-11-2010) ತತ್ಸಂಬಂಧ **ಮೆ॥ ನೀಲಾಂಜನ ಎಂಟರ್ ಪ್ರೈಸಸ್** ರವರು ಪರಿಷ್ಕೃತ ವೇತನದಂತೆ ಹೆಚ್ಚುವರಿ ಮೊತ್ತ ಮಂಜೂರು ಮಾಡಬೇಕೆಂದು ಮನವಿ ಸಲ್ಲಿಸಿರುತ್ತಾರೆ.

ಟೆಂಡರ್ ನಿಯಮ ಸೆಕ್ಷನ್ – 11, ಟೆಂಡರ್‌ನ ಸಾಮಾನ್ಯ ನಿಯಮಗಳು ಕ್ರಮ ಸಂಖ್ಯೆ (4) ರ ರೀತ್ಯ (ಪುಟ-18) The agency should pay the wages to its works as per minimum wages ACT. If any modification requires such as increase/decrees in minimum wages ACT, BBMP shall take a decision accordingly. ಎಂದಿರುತ್ತದೆ.

ಮೇಲಿನ ಸರ್ಕಾರದ ಆದೇಶದ ರೀತ್ಯಾ ದಿನಾಂಕ: 01-04-2012 ರಿಂದ ಪಾವತಿಸಬೇಕಾಗಿರುವ ವೇತನ ವ್ಯತ್ಯಾಸದ ವಿವರ ಈ ಕೆಳಕಂಡಂತಿರುತ್ತದೆ.

| Pay Details | Existing Wages from 01-04-2011 to 31-03-2012 | Actual Calculation of revised wages from 01-04-2012 to 31-03-2013 |
|---|---|---|
| Basic Pay + VDA | 4104.00 | 4410.00 |
| ESI Rs.4.75% | 194.94 | 209.47 |
| PF Rs.13.61% | 558.55 | 600.20 |
| Total-A | 4857.49 | 5219.67 |
| Total-A/Ayaha X 198 | 961783.00 | 1033494.66 |
| Service Charges | 90000.00 | 90000.00 |
| Cleaning Material Charges | 10000.00 | 10000.00 |
| Total | 1061783.00 | 1133494.66 |
| Service Tax 10.3% | 109363.00 | 0.00 |
| Service Tax 12.36% | 0.00 | 140099.93 |
| Grand Total | 1171147.00 | 1273594.59 |
| **Round off** | **11,71,147.00** | **12,73,595.00** |

(Actual Difference per Month Rs.12,73,595 – 11,71,147 = 1,02,448)

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಮೇಲಿನ ಪಟ್ಟಿಯನ್ವಯ ಗುತ್ತಿಗೆದಾರರಿಗೆ ದಿನಾಂಕ: 01-04-2012 ರಿಂದ ಪ್ರತಿ ತಿಂಗಳಿಗೆ ರೂ.1,02,448/- ರೂ. ಗಳಂತೆ ಗುತ್ತಿಗೆ ಅವಧಿ ಮುಕ್ತಾಯವಾಗುವವರೆಗೆ (ದಿನಾಂಕ: 14-12-2012) ಒಟ್ಟಾರೆ ರೂ.8,67,393/- ಮೊತ್ತ ಪಾವತಿಸುವ ಬಗ್ಗೆ ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ವಿಶೇಷ ಆಯುಕ್ತರ ದಿನಾಂಕ: 19-11-2012 ರ ಟಿಪ್ಪಣಿಯನ್ನು ಒಪ್ಪುತ್ತಾ ಪಾಲಿಕೆ ಆಸ್ಪತ್ರೆಗಳ ಸ್ವಚ್ಛತಾ ಸೇವೆಯ ಗುತ್ತಿಗೆ ಅವಧಿಯು ದಿನಾಂಕ: 14-12-2012 ಕ್ಕೆ ಮುಕ್ತಾಯವಾಗಲಿದ್ದು, ಪಾಲಿಕೆ ವತಿಯಿಂದ ಹೊಸ ಟೆಂಡರ್ ಕರೆಯುವ ಪ್ರಕ್ರಿಯೆ ವಿಳಂಬವಾಗಿರುವುದರಿಂದ ಹಾಗೂ ಆಸ್ಪತ್ರೆಗಳ ಸ್ವಚ್ಛತಾ ಸೇವೆಯು ಅತ್ಯಾವಶ್ಯಕವಾಗಿರುವುದರಿಂದ ಶ್ರೀ.ನೀಲಾಂಜನಾ ಎಂಟರ್ ಪ್ರೈಸಸ್ ರವರಿಗೆ ದಿನಾಂಕ: 15-12-2012 ರಿಂದ ಪರಿಷ್ಕೃತ ವೇತನದನ್ವಯ ಗುತ್ತಿಗೆ ಅವಧಿಯನ್ನು ಒಂದು ವರ್ಷಕ್ಕೆ ಮುಂದುವರಿಸಲು ಸಮಿತಿಯು ತೀರ್ಮಾನಿಸಿತು.**

**3. ವಿಷಯದ ಸಂಖ್ಯೆ: ಸಾಆಸ್ಥಾಸ/64/2012-13:**

ಸಂಖ್ಯೆ: ಜಂ.ಆ.(ಘ.ತ್ಯಾ.ನಿ.ಕೋ&ಆ)/ಎಫ್/507/2012-13, ದಿನಾಂಕ: 29-11-2012 ರ ಆಯುಕ್ತರು ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಘನತ್ಯಾಜ್ಯ ವಸ್ತುಗಳ ಸಂಸ್ಕರಣೆ ಮತ್ತು ವಿಲೇವಾರಿಗೆ ಸಂಬಂಧಿಸಿದಂತೆ ಘನ ಉಚ್ಛ ನ್ಯಾಯಾಲಯವು ಮೂಲ ದಾವೆ ಸಂಖ್ಯೆ: 24739-49/2012 ಮತ್ತು 30450/2012, ದಿನಾಂಕ: 22-11-2012 ರಂದು ನೀಡಿರುವ ಆದೇಶದಂತೆ ಕಾಲಮಿತಿಯೊಳಗೆ ಅನುಷ್ಠಾನಗೊಳಿಸಲು ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ ನಿಯಮಿತ (KCDC) ರವರಿಗೆ, ಸುಮಾರು ಪ್ರತಿದಿನ 75 ರಿಂದ 100 ಟನ್ ಬೇರ್ಪಡಿಸಿದ ಹಸಿ ಕಸವನ್ನು ಸ್ವೀಕರಿಸುವ ಮತ್ತು ಇತರೆ ನಿಬಂಧನೆಗಳನ್ನು ಪಾಲನೆ ಮಾಡುವ ಬಗ್ಗೆ ಸೂಚಿಸಲಾಗಿರುತ್ತದೆ.

ಘನತ್ಯಾಜ್ಯ ನಿರ್ವಹಣೆಗೆ ಗೌರವಾನ್ವಿತ ಉಚ್ಛ ನ್ಯಾಯಾಲಯವು ಮೂಲ ದಾವೆ ಸಂಖ್ಯೆ: 24739-49/2012 ರ ಮೊಕದ್ದಮೆ ದಿನಾಂಕ: 22-11-2012 ರಲ್ಲಿ ನೀಡಿರುವ ನಿರ್ದೇಶನದಂತೆ ಪಾಲಿಕೆಯ ದಕ್ಷಿಣ ವಲಯ ಮತ್ತು ಬೊಮ್ಮನಹಳ್ಳಿ ವಲಯಗಳಿಂದ ಪ್ರತಿದಿನ ಉತ್ಪತ್ತಿಯಾಗುವ ಸುಮಾರು 75 ರಿಂದ 100 ಮೆಟ್ರಿಕ್ ಟನ್ ಹಸಿ ತ್ಯಾಜ್ಯವನ್ನು (KCDC) ರವರಿಗೆ ಕ್ರಮ ಕೈಗೊಳ್ಳಲು ವಹಿಸಬಹುದಾಗಿದ್ದು, ಈ ಬಗ್ಗೆ ಕೆ.ಸಿ.ಡಿ.ಸಿ. ಸಂಸ್ಥೆಯವರೊಂದಿಗೆ ಸಮಾಲೋಚಿಸಿ ಚರ್ಚೆ ಮಾಡಿದ್ದು, ಸದರಿಯವರು ಕೆಳಗೆ ಕಾಣಿಸಿರುವ ಅಂಶಗಳ ಕುರಿತ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಅಭಿವೃದ್ಧಿಪಡಿಸಲು ಸುಮಾರು ರೂ.4.45 ಕೋಟಿಗಳ ಅಂದಾಜು ಮೊತ್ತದ ಪ್ರಸ್ತಾವನೆಯನ್ನು ಸಲ್ಲಿಸಿ, ಸದರಿ ಮೊತ್ತವನ್ನು ಬಿ.ಬಿ.ಎಂ.ಪಿ. ವತಿಯಿಂದ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಕೆ.ಸಿ.ಡಿ.ಸಿ. ಸಂಸ್ಥೆರವರು ಮೂಲಭೂತ ಸೌಕರ್ಯಗಳನ್ನು ಒದಗಿಸುವ ಹಿನ್ನೆಲೆಯಲ್ಲಿ ಕೋರಿರುವ ಒಟ್ಟಾರೆ ರೂ. 4.45 ಕೋಟಿಗಳ ಮೊತ್ತದ ಕೆಳಕಂಡ ಅಂಶಗಳ ತತ್ವಶಃ (Inprinciple) ಪ್ರಸ್ತಾವನೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ತೀರ್ಮಾನಕ್ಕಾಗಿ ಮಂಡಿಸಲಾದ ಟಿಪ್ಪಣಿ.

1. ಕೆ.ಸಿ.ಡಿ.ಸಿ. ಅಭಿವೃದ್ಧಿ ನಿಗಮದವರು, ವಾರ್ಡ್ ನಂ.192 ರ ಸಿಂಗಸಂದ್ರದಲ್ಲಿ ಬೇರ್ಪಡಿಸದ ಘನತ್ಯಾಜ್ಯವನ್ನು ಸ್ಥಳಾಂತರಿಸಲು ಮತ್ತು ಹೊಸ ಘನ ತ್ಯಾಜ್ಯವನ್ನು ಶೇಖರಿಸಲು ಅಂದಾಜು ರೂ.25.00 ಲಕ್ಷಗಳು.

2. ಪೂರ್ವ ಮತ್ತು ಉತ್ತರ ದಿಕ್ಕಿನಲ್ಲಿ ಎತ್ತರವಾದ ಕಟ್ಟಡಗಳಿರುವುದರ ನೋಟವನ್ನು ತಡೆಯಲು ಎಂ.ಎಸ್. ಶೀಟ್ ಬ್ಯಾರಿಕೇಡಿಂಗ್ ನಿರ್ಮಿಸುವ ಅಂದಾಜು ರೂ.2.00 ಕೋಟಿ.

S. Venkatesh Babu
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

3. ಕಾಂಪೌಂಡ್ ಸುತ್ತಲೂ ಗಾಳಿ ಬೀಸುವಿಕೆಯನ್ನು ತಡೆಯಲು ಮರಗಳಾಗುವ ಸಸಿಗಳನ್ನು ನೆಡುವುದು (ಬಿ.ಬಿ.ಎಂ.ಪಿ. 30 ಎಕರೆ ಸೇರಿ) ಅಂದಾಜು ರೂ.20.00 ಲಕ್ಷ.

4. ಹೆಚ್.ಎಸ್.ಆರ್. ಲೇಔಟ್ ಕಡೆಯಿಂದ ಹೊಸ ಘನತ್ಯಾಜ್ಯವನ್ನು ತರಲು ಅಪ್ರೋಚ್ ರಸ್ತೆ ನಿರ್ಮಿಸುವುದು ಕಾಂಕ್ರೀಟ್ ಯಾರ್ಡ್ (ಎರಡು ಎಕರೆ) ಸುತ್ತ ಎತ್ತರವಾದ ಛಾವಣಿ ನಿರ್ಮಿಸಲು, ವೈಜ್ಞಾನಿಕವಾಗಿ ಘನತ್ಯಾಜ್ಯ ಬೇರ್ಪಡಿಸುವಿಕೆಯ ವಾಸನೆ ಮತ್ತು ನೋಟವನ್ನು ತಡೆಯಲು ಅಂದಾಜು ರೂ.2.00 ಕೋಟಿ.

ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಮಾನ್ಯ ಆಯುಕ್ತರ ದಿನಾಂಕ: 29-11-2012 ರ ಟಿಪ್ಪಣಿಯನ್ನು ಸಮಿತಿಯು ಒಪ್ಪಲು ತೀರ್ಮಾನಿಸಿತು.**

**4. ವಿಷಯದ ಸಂಖ್ಯೆ: ಸಾಆಸ್ಥಾಸ/65/2012-13:**

ಸಂಖ್ಯೆ: ಮುಆಅ/ಎಸಿಟಿ/2/2012-13, ದಿನಾಂಕ: 04-12-2012 ರ ಆಯುಕ್ತರು ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಕರ್ನಾಟಕ ಸರ್ಕಾರದ ಪ್ರತಿಷ್ಠಿತ ಕಾರ್ಯಕ್ರಮಗಳಲ್ಲೊಂದಾದ "ಮಡಿಲು ಯೋಜನೆಯಡಿ" ಸುರಕ್ಷಿತ ಹೆರಿಗೆ ಮತ್ತು ತಾಯಿ ಮಗುವಿನ ಆರೋಗ್ಯ ಸುರಕ್ಷತೆಗಾಗಿ ಬಾಣಂತಿಯರಿಗೆ ಮಡಿಲು ಕಿಟ್ ವಿತರಿಸುವ ಯೋಜನೆಯನ್ನು 2009-10ನೇ ಸಾಲಿನಿಂದ ಜಾರಿಗೆ ತಂದಿದ್ದು, ಸದರಿ ಯೋಜನೆಯನ್ವಯ ಪಾಲಿಕೆಯ 06 ರೆಫರಲ್ ಆಸ್ಪತ್ರೆಗಳು ಮತ್ತು 24 ಹೆರಿಗೆ ಆಸ್ಪತ್ರೆಗಳಲ್ಲಿ ಜನಿಸುವ ಎಲ್ಲಾ ಶಿಶುಗಳ ತಾಯಂದಿರಿಗೂ ಸಹ ತಲಾ ಒಂದು ಮಡಿಲು ಕಿಟ್‌ನ್ನು ಉಚಿತವಾಗಿ ನೀಡಲಾಗುತ್ತಿದೆ.

2011-12ನೇ ಸಾಲಿನಲ್ಲಿ ಅವಶ್ಯವಿದ್ದ 13,000 ಪೋಸ್ಟ್ ನ್ಯಾಟಲ್ ಕಿಟ್‌ಗಳನ್ನು ಪ್ರತಿ ಕಿಟ್ 1 ಕ್ಕೆ ರೂ.1370/- ರೂ ದರದಂತೆ ಒಟ್ಟಾರೆ ರೂ.1,82,39,000/- ಮೊತ್ತದಲ್ಲಿ ಖರೀದಿಸಲಾಗಿತ್ತು. (ಮೆ॥ ಕರ್ನಾಟಕ ಕೈ ಮಗ್ಗ ಅಭಿವೃದ್ಧಿ ನಿಗಮ ನಿಯಮಿತ ರವರಿಂದ 12 ಪರಿಕರಗಳುಳ್ಳ 1 ಕಿಟ್‌ಗೆ ರೂ.1246/- ಮೊತ್ತದಲ್ಲಿ 13000 ಕಿಟ್‌ಗಳನ್ನು ಮತ್ತು ಮೆ॥ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿ., ರವರಿಂದ 6 ಪರಿಕರಗಳುಳ್ಳ ಒಂದು ಕಿಟ್‌ಗೆ ರೂ.157/- ನಂತೆ 13000 ಕಿಟ್‌ಗಳನ್ನು ರೂ.20,41,000/- ಮೊತ್ತದಲ್ಲಿ).

2012-13ನೇ ಸಾಲಿಗೆ ಅವಶ್ಯವಿರುವ ಪೋಸ್ಟ್ ನ್ಯಾಟಲ್ ಕಿಟ್‌ಗಳನ್ನು ಖರೀದಿಸಬೇಕಾಗಿದ್ದು, ಎಲ್ಲಾ ಆಸ್ಪತ್ರೆಗಳಲ್ಲಿ ಜರುಗುವ ಒಟ್ಟು ಶಿಶುಗಳ ಜನನದ ಆಧಾರದಲ್ಲಿ ಖರೀದಿಸಲಾಗುತ್ತಿದೆ. ಅದರಂತೆ ಪಾಲಿಕೆಯ 6 ರೆಫರಲ್ ಆಸ್ಪತ್ರೆಗಳು ಮತ್ತು 24 ಹೆರಿಗೆ ಆಸ್ಪತ್ರೆಗಳಲ್ಲಿ ಕಳೆದ 4 ವರ್ಷಗಳಲ್ಲಿ ಸಂಭವಿಸಿರುವ ಶಿಶು ಜನನದ (ಹೆರಿಗೆಗಳ) ವಿವರಗಳು ಈ ಕೆಳಕಂಡಂತಿರುತ್ತವೆ.

| | | | |
|---|---|---|---|
| 1. | 2008-09 | - | 20,209 ಜನನಗಳು |
| 2. | 2009-10 | - | 18,987 ಜನನಗಳು |
| 3. | 2010-11 | - | 16,078 ಜನನಗಳು |
| 4. | 2011-12 | - | 13,947 ಜನನಗಳು |
| 5. | 2012-13 | - | 6,026 (Up to August 2012) |

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಮೇಲಿನ ಪಟ್ಟಿಯನ್ವಯ ವರ್ಷದ ಅಂತ್ಯಕ್ಕೆ 13,000 ಕ್ಕಿಂತ ಅಧಿಕ ಹೆರಿಗೆಗಳು ಸಂಭವಿಸಬಹುದೆಂದು ಅಂದಾಜಿಸಲಾಗಿದೆ. ಪಾಲಿಕೆ ಆಸ್ಪತ್ರೆಗಳಲ್ಲಿ ಜನಿಸಿದ ಎಲ್ಲಾ ಶಿಶುಗಳು ತಾಯಂದಿರಿಗೆ ಮಡಿಲು ಕಿಟ್ ನೀಡುವ ಯೋಜನೆಯಿರುವುದಾಗಿ ಕೇಂದ್ರ ಔಷಧ ಮಳಿಗೆಯ ಔಷಧ ತಜ್ಞರು ವರದಿ ಸಲ್ಲಿಸಿದ್ದು, ಅದರಂತೆ 2012-13ನೇ ಸಾಲಿಗೆ ಕಳೆದ ಬಾರಿ ಖರೀದಿಸಲಾಗಿದ್ದ 13,000 ಕಿಟ್‌ಗಳಿಗಿಂತ ಶೇ.10% ರಷ್ಟು ಹೆಚ್ಚಳ ಮಾಡಿ 14300 ಮಡಿಲು ಕಿಟ್‌ಗಳನ್ನು ಖರೀದಿಸಲು ತೀರ್ಮಾನಿಸಲಾಗಿರುತ್ತದೆ.

**ಸರ್ಕಾರದ ಆದೇಶ ಸಂಖ್ಯೆ: ಆಕುಕ: 186 ಸಿಜಿಎಂ.2012 ಬೆಂಗಳೂರು, ದಿನಾಂಕ: 17-05-2012** ರ ರೀತ್ಯ ಬಾಣಂತಿಯರಿಗೆ ನೀಡುವ ಕಿಟ್‌ಗಳ ಬೆಲೆಯನ್ನು ಮೇಲೆ ತಿಳಿಸಲಾದ ದರಕ್ಕಿಂತ ಶೇ.10% ರಷ್ಟು ದರ ಹೆಚ್ಚಿಸಿ ಮಂಜೂರಾತಿ ನೀಡಲಾಗಿರುತ್ತದೆ. ಅದರಂತೆ ವಿವರ ಈ ಕೆಳಕಂಡಂತಿರುತ್ತದೆ.

**ಮೆ॥ ಕರ್ನಾಟಕ ಕೈ ಮಗ್ಗ ಅಭಿವೃದ್ಧಿ ನಿಗಮ ನಿಯಮಿತ ರವರಿಂದ ಖರೀದಿಸಲಾಗುವ ಪರಿಕರಗಳು**

| ಕ್ರಮ ಸಂಖ್ಯೆ | ಪರಿಕರಗಳ ವಿವರ | ಸ್ಪೇಸಿಫಿಕೇಷನ್ | ಒಟ್ಟು ಕಿಟ್‌ಗಳ ಸಂಖ್ಯೆ | ಪ್ರಮಾಣ 2011-12ನೇ ಸಾಲಿನ ದರ | 2012-13 ನೇ ಸಾಲಿನ ಪರಿಷ್ಕೃತ |
|---|---|---|---|---|---|
| 1 | Jamkhana | 48' X 78" | 1 No. | 231.00 | 254.10 |
| 2 | Checks Bed Sheet | 48' X 88" | 1 No. | 92.00 | 101.20 |
| 3 | Woolen Blanket | 60" X 90" | 1 No. | 326.00 | 358.60 |
| 4 | Checks Towel | 25" X 52" | 2 No. | 62.00 | 68.20 |
| 5 | Printed Bed Sheet for Baby | 24" X 24" | 2 No. | 108.00 | 118.80 |
| 6 | Child Jubba | 24" X 24" | 3 No. | 62.00 | 68.00 |
| 7 | Cotton Diaper | 24" X 24" | 6 No. | 46.00 | 50.60 |
| 8 | Flannel Bed Sheet for Baby | 20" X 30" | 1 No. | 62.00 | 68.20 |
| 9 | Abdominal Belt for Mother | 20" X 30" | 1 No. | 62.00 | 68.20 |
| 10 | Rubber Sheet for Baby | 24" X 24" | 1 No. | 62.00 | 68.20 |
| 11 | Sweater, Cap & Socks for Baby with Zip | (0-1 year) | 1 No. | 77.00 | 84.70 |
| 12 | Plastic Bag with Zip | 155.5" X 18.5" X 6.5 | 1 No. | 56.00 | 61.60 |
| | | | Total Rs. | Rs.1246.00 | Rs.1370.60 |

**ಮೆ॥ ಕರ್ನಾಟಕ. ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿ., ರವರಿಂದ ಖರೀದಿಸಲಾಗುವ ಪರಿಕರಗಳ ವಿವರ**

| ಕ್ರಮ ಸಂಖ್ಯೆ | ಪರಿಕರಗಳ ವಿವರ | ಒಟ್ಟು ಕಿಟ್‌ಗಳ ಸಂಖ್ಯೆ | 2011-12ನೇ ಸಾಲಿನ ದರ | 2012-13 ನೇ ಸಾಲಿನ ಪರಿಷ್ಕೃತ ದರ |
|---|---|---|---|---|
| 1 | Mysore Wave Bathing Bar (100 grms) | 2 | 23.52 | 25.87 |
| 2 | Mysore Detergent Cake (150 grms) | 4 | 22.40 | 24.64 |
| 3 | Coconut Oil (200 ml with comb) | 1 | 40.32 | 44.35 |
| 4 | Mysore Sandal Baby Soap (75 grms) | 2 | 44.80 | 45.28 |
| 5 | Mysore Sandal Baby Powder (50 grms) | 1 | 14.56 | 16.01 |
| 6 | Tooth Paste with Bruch (50 grms) | 1 | 11.20 | 12.32 |
| | | Total Rs. | 157.00 | 168.47 |

ಮೇಲಿನಂತೆ ಮೆ॥ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ ರವರಿಂದ 12 ಪರಿಕರಗಳುಳ್ಳ ಕಿಟ್ ಒಂದಕ್ಕೆ ರೂ.1370=60 ದರದಂತೆ 14,300 ಕಿಟ್‌ಗಳಿಗೆ ರೂ.1,95,99,580 ಮೊತ್ತ ಮತ್ತು ಮೆ॥ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ರವರಿಂದ 6 ಪರಿಕರಗಳುಳ್ಳ ಕಿಟ್ ಒಂದಕ್ಕೆ ರೂ.168.47 ದರದಂತೆ 14,300 ಕಿಟ್‌ಗಳಿಗೆ ರೂ.24,09,121/- ಮೊತ್ತ ಅಂದರೆ ಒಟ್ಟಾರೆ 1,95,99,580+24,09,121=2,20,08701) **ರೂ.ಎರಡು ಕೋಟಿ ಇಪ್ಪತ್ತು ಲಕ್ಷದ ಎಂಟು ಸಾವಿರದ ಏಳುನೂರು ಒಂದು** ಮೊತ್ತ ಖರ್ಚಾಗಲಿದ್ದು, 2012-13ನೇ **ಲೆಖ್ಖ ಶೀರ್ಷಿಕೆ 14. ಆರೋಗ್ಯ, ವೈದ್ಯಕೀಯ ನವಜಾತ ಶಿಶುಗಳಿಗೆ ಆರೈಕೆಯ** ಕಿಟ್ ಖರೀದಿಗಾಗಿ (P.1824) ಮೀಸಲಿಟ್ಟಿರುವ ಮೊತ್ತದಲ್ಲಿ ಈ ಖರ್ಚನ್ನು ಭರಿಸಿ

S. Venkatesh Babu

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಮಡಿಲು ಕಿಟ್‌ಗಳನ್ನು ಮೇಲಿನ ಸಂಸ್ಥೆಗಳಿಂದ ಖರೀದಿಸುವ ಬಗ್ಗೆ ತೀರ್ಮಾನ ತೆಗೆದುಕೊಳ್ಳಲು ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಮಾನ್ಯ ಆಯುಕ್ತರ ದಿನಾಂಕ: 04-12-2012 ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

**5. ವಿಷಯದ ಸಂಖ್ಯೆ: ಸಾಆಸ್ಥಾಸ/66/2012-13:**

ದಿನಾಂಕ: 20-11-2012 ರ ಅಪರ ಆಯುಕ್ತರು (ಘ.ತ್ಯಾ.ನಿ) ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪಶ್ಚಿಮ ವಲಯದ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಸ್ತುಗಳ ವಿಲೇವಾರಿಗಾಗಿ ಮಾನ್ಯ ಆಯುಕ್ತರ ಆದೇಶದಂತೆ ಒಟ್ಟು 05 ಪ್ಯಾಕೇಜ್‌ಗಳಿಗೆ ಟೆಂಡರ್ ಸಂಖ್ಯೆ: EE/EO(MLM)/Tender/01/2012-13 ದಿನಾಂಕ: 03-11-2012 ರಂತೆ ಮರು ಟೆಂಡರ್ ಕರೆಯಲಾಗಿದೆ. ಟೆಂಡರ್ ಸ್ವೀಕರಿಸಲು ಅಂತಿಮ ದಿನಾಂಕ: 13-11-2012 ಆಗಿದ್ದು, ತಾಂತ್ರಿಕ ಟೆಂಡರ್‌ಗಳನ್ನು ದಿನಾಂಕ: 15-11-2012 ರಂದು ತೆರೆಯಲಾಗಿದೆ. ಒಟ್ಟು 05 ಪ್ಯಾಕೇಜ್‌ಗಳಿಗೆ ಟೆಂಡರ್ ಬಂದಿದ್ದು, ಟೆಂಡರ್ ಬಂದಿರುವ ಪ್ಯಾಕೇಜ್‌ಗಳ ತಾಂತ್ರಿಕ ಪರಿಶೀಲನೆಯನ್ನು ದಿನಾಂಕ: 17-11-2012 ರಂದು ಟೆಂಡರ್ ಪರಿಶೀಲನಾ ಸಮಿತಿ ಪರಿಶೀಲನೆ ನಡೆಸಿದೆ.

ಪ್ಯಾಕೇಜ್‌ವಾರು, ಬಂದಿರುವ ಟೆಂಡರ್‌ಗಳ ವಿವರ, ಅವರ ತಾಂತ್ರಿಕ ಅರ್ಹತೆ ಹೊಂದಿದವರ ವಿವರಗಳು ಕೆಳಕಂಡಂತಿದೆ.

| ಕ್ರಮ ಸಂಖ್ಯೆ | ಪ್ಯಾಕೇಜ್ ಸಂಖ್ಯೆ | ಪ್ಯಾಕೇಜ್ ವ್ಯಾಪ್ತಿಗೆ ಬರುವ ವಾರ್ಡ್ ಸಂಖ್ಯೆಗಳು | ಪ್ಯಾಕೇಜ್‌ಗೆ ಬಂದಿರುವ ಟೆಂಡರ್‌ಗಳ ಒಟ್ಟು ಸಂಖ್ಯೆ | ತಾಂತ್ರಿಕವಾಗಿ ಅರ್ಹಗೊಂಡ ಟೆಂಡರ್‌ಗಳ ಸಂಖ್ಯೆ | ತಾಂತ್ರಿಕವಾಗಿ ಅರ್ಹಗೊಂಡ ಟೆಂಡರ್‌ಗಳ ಸಂಖ್ಯೆ | ತಾಂತ್ರಿಕವಾಗಿ ಅರ್ಹಗೊಂಡ ಟೆಂಡರ್‌ದಾರರ ಹೆಸರು |
|---|---|---|---|---|---|---|
| 1 | W-1 | 64, 65 | 9 | 3 | 06 | ಶ್ರೀ.ಮಂಜುನಾಥ್<br>ಶ್ರೀ.ಎನ್.ಗೌತಮ್ ರಾಜು<br>ಶ್ರೀ.ಎಲ್.ಕುಮಾರ್<br>ಶ್ರೀ.ಅಯ್ಯಪ್ಪ ವರಪ್ರಸಾದ್<br>ಶ್ರೀ.ಆರ್. ಸತೀಶ್<br>ಶ್ರೀ.ಕೆ.ಆರ್.ಶ್ರೀನಿವಾಸ್ ರೆಡ್ಡಿ |
| 2 | W-6 | 97, 98, 108 | 5 | 1 | 04 | ಶ್ರೀ.ಟಿ.ಶ್ರೀಧರ್<br>ಶ್ರೀ.ಎಲ್.ಕುಮಾರ್<br>ಶ್ರೀ.ಸತ್ಯ ಕನ್‌ಸ್ಟ್ರೇಕ್ಷನ್<br>ಶ್ರೀ.ಕೆ.ಆರ್.ಶ್ರೀನಿವಾಸ್ ರೆಡ್ಡಿ |
| 3 | W-7 | 94,77 | 4 | 2 | 02 | ಶ್ರೀ.ವಿ.ಆರ್.ಎಂಟರ್ ಪ್ರೈಸಸ್<br>ಶ್ರೀ.ಗ್ಲೋಬಲ್ ಎಂಟರ್ ಪ್ರೈಸಸ್ |
| 4 | W-10 | 135, 136 | 2 | 0 | 02 | ಶ್ರೀ.ಬಿ.ಎಸ್. ಸುರೇಶ್ ಚಂದ್ರನಾಥ್<br>ಶ್ರೀ.ಎನ್.ನಾಗರಾಜ್ |
| 5 | W-12 | 139 | 2 | 0 | 02 | ಶ್ರೀ.ಎನ್.ಗೌತಮ್ ರಾಜು<br>ಶ್ರೀ.ಕೆ.ಆರ್.ಶ್ರೀನಿವಾಸ್ ರೆಡ್ಡಿ |

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಮಾನ್ಯ ಆಯುಕ್ತರ ಕಛೇರಿ ಆದೇಶ್ ಸಂಖ್ಯೆ: ಆಯುಕ್ತರು/ಪಿಎಸ್‌ಆರ್/(4)7985/2012-13, ದಿನಾಂಕ: 03-11-2012 ರಂತೆ ಟೆಂಡರ್ ಮೌಲ್ಯಮಾಪನ ಸಮಿತಿ ರಚಿಸಲಾಗಿದ್ದು, ಅಪರ ಆಯುಕ್ತರು (ಪಶ್ಚಿಮ) ರವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಅಧಿಕಾರಿಗಳನ್ನು ಸಮಿತಿಯ ಸದಸ್ಯರುಗಳನ್ನಾಗಿ ನೇಮಿಸಲಾಗಿದೆ.

1. ಮುಖ್ಯ ಅಭಿಯಂತರರು (ಪಶ್ಚಿಮ)
2. ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರು (ಮಲ್ಲೇಶ್ವರಂ/ಗಾಂಧಿನಗರ/ರಾಜಾಜಿನಗರ/ಚಾಮರಾಜಪೇಟೆ)
3. ಸಹಾಯಕ ನಿಯಂತ್ರಕರು (ಹಣಕಾಸು)

ಟೆಂಡರ್ ನಿಬಂಧನೆಗಳಂತೆ ತಾಂತ್ರಿಕವಾಗಿ ಅರ್ಹವಾಗಿರುವ ಟೆಂಡರ್‌ದಾರರುಗಳನ್ನು ತಾಂತ್ರಿಕವಾಗಿ ಅರ್ಹಗೊಳಿಸಿ ಆ ಟೆಂಡರ್‌ಗಳ ಆರ್ಥಿಕ ಬಿಡ್‌ಗಳನ್ನು ದಿನಾಂಕ: 21-11-2012 ರಂದು ತೆರೆಯಲಾಗಿದೆ. ಆರ್ಥಿಕ ಬಿಡ್‌ದಲ್ಲಿ ಎಲ್-1 ಆಗಿರುವವರ ವಿವರ ಹಾಗೂ ಇತರ ಬಿಡ್‌ದಾರರು ಆರ್ಥಿಕ ಟೆಂಡರ್‌ನಲ್ಲಿ ನೀಡಿರುವ ದರಗಳು ಮತ್ತು ಬಿ.ಬಿ.ಎಂ.ಪಿ. ಯ ಮೌಲ್ಯಮಾಪನ ದರಕ್ಕೆ ಹೋಲಿಸಿದಾಗ ಹೆಚ್ಚುವರಿ ಮತ್ತು ಕಡಿಮೆ ಆಗಿರುವ ಶೇಕಡವಾರು ದರಗಳ ವಿವರಗಳು ಈ ಕೆಳಕಂಡಂತಿವೆ.

| ಪ್ಯಾಕೇಜ್ ಸಂಖ್ಯೆ ಮತ್ತು ವಾರ್ಡ್ ಸಂಖ್ಯೆ | ಟೆಂಡರ್ ಸಲ್ಲಿಸಿದ ಗುತ್ತಿಗೆದಾರರ ಸಂಖ್ಯೆ | ತಾಂತ್ರಿಕ ಪರಿಶೀಲನೆಯಲ್ಲಿ ಯಶಸ್ವಿಯಾದ ಗುತ್ತಿಗೆದಾರರ ಸಂಖ್ಯೆ | ಪ್ಯಾಕೇಜ್‌ನ ಮೌಲ್ಯಮಾಪನದ ಮೊತ್ತ | ಯಶಸ್ವಿ ಎಲ್-1 ಬಿಡ್ಡುದಾರರು ಹಾಗೂ ಇತರ ಬಿಡ್ಡುದಾರರ ಹೆಸರು ಹಾಗೂ ಆರ್ಥಿಕ ಬಿಡ್‌ನಲ್ಲಿ ನಮೂದಿಸಿದ ಮೊತ್ತ | | | | |
|---|---|---|---|---|---|---|---|---|
| | | | | ಹೆಸರು | ಮೊತ್ತ (ರೂ.ಗಳಲ್ಲಿ) | ಬಿಡ್‌ದಾರರ ವರ್ಗ | ಮೌಲ್ಯಮಾಪನದ ಮೊತ್ತಕ್ಕೆ ಶೇಕಡವಾರು ಹೆಚ್ಚು/ಕಡಿಮೆ | ಶ್ರೇಣಿ |
| **W-01 (64, 65)** | 09 | 06 | 2146000 | ಮಂಜುನಾಥ್ | 1540047 | SC/ST | -2823% | ಎಲ್-1 |
| | | | | ಎನ್.ಗೌರಮ್‌ರಾಜು | 1586100 | SC/ST | -26.09% | ಎಲ್-2 |
| | | | | ಎಲ್.ಕುಮಾರ್ | 1669550 | SC/ST | -22.20% | ಎಲ್-3 |
| | | | | ಅಯ್ಯಪ್ಪ ವರಪ್ರಸಾದ್ | 1751200 | SC/ST | -18.39% | ಎಲ್-4 |
| | | | | ಆರ್.ಸತೀಶ್ | 2522500 | General | +17.54% | ಎಲ್-5 |
| | | | | ಕೆ.ಆರ್.ಶ್ರೀನಿವಾಸ್ ರೆಡ್ಡಿ | 3214899 | General | +49.80% | ಎಲ್-6 |
| **W-06 (97, 98, 108)** | 05 | 04 | 2792000 | ಟಿ.ಶ್ರೀಧರ್ | 2351150 | SC/ST | -15.79% | ಎಲ್-1 |
| | | | | ಎಲ್.ಕುಮಾರ್ | 2386958 | SC/ST | -14.05% | ಎಲ್-2 |
| | | | | ಸತ್ಯ ಕನ್‌ಸ್ಟ್ರಕ್ಷನ್ಸ್ | 3500000 | General | +25.35% | ಎಲ್-3 |
| | | | | ಕೆ.ಆರ್.ಶ್ರೀನಿವಾಸ್ ರೆಡ್ಡಿ | 4444299 | General | +59.18% | ಎಲ್-4 |
| **W-07 (77, 94)** | 04 | 02 | 2075000 | ವಿ.ಆರ್. ಎಂಟರ್‌ಪ್ರೈಸಸ್ | 1367000 | General | -34.12% | ಎಲ್-1 |
| | | | | ಗ್ಲೋಬಲ್ ಎಂಟರ್ ಪ್ರೈಸಸ್ | 1859999 | General | -10.36% | ಎಲ್-2 |
| **W-10 (135, 136)** | 02 | 02 | 4402000 | ಜಿ.ಎಸ್. ಸುರೇಶ್ ಚಂದ್ರನಾಥ್ | 3337000 | SC/ST | -24.19% | ಎಲ್-1 |
| | | | | ಎನ್.ನಾಗರಾಜ್ | 3456277 | SC/ST | -21.48% | ಎಲ್-2 |
| **W-12 (139)** | 02 | 02 | 3343000 | ಎಂ.ಗೌತಮ್ ರಾಜ್ | 2888000 | SC/ST | -13.61% | ಎಲ್-1 |
| | | | | ಕೆ.ಆರ್. ಶ್ರೀನಿವಾಸ್ ರೆಡ್ಡಿ | 5226000 | General | +56.32% | ಎಲ್-2 |

ಟೆಂಡರ್ ನಿಬಂಧನೆಗಳಲ್ಲಿ 2 ಪ್ರಮುಖ ನಿಬಂಧನೆಗಳನ್ನು ಗಮನದಲ್ಲಿ ಇಟ್ಟುಕೊಂಡು ಅವರ ಅರ್ಹತೆಯ ಬಗ್ಗೆ ಶಿಫಾರಸ್ಸು ಮಾಡಿದೆ.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

1. ಟೆಂಡರ್ ನಿಬಂಧನೆಗಳಲ್ಲಿ Standards and specifications (Appendix-G) ಅಡಿಯಲ್ಲಿ ಒಂದು ನಿಬಂಧನೆ ಇದ್ದು, Appendix-2 ನಲ್ಲಿ ನಿಗಧಿಪಡಿಸಿರುವ ಅಗತ್ಯ ಸಂಖ್ಯೆಯ ಸಿಬ್ಬಂದಿ ವಾಹನ ಮತ್ತು ಇತರೆ ಅವಶ್ಯಕತೆಗಳಿಗೆ ಕಡಿಮೆ ಇಲ್ಲದಂತೆ ಕಡ್ಡಾಯವಾಗಿ ಒದಗಿಸಬೇಕು.

2. ಟೆಂಡರ್‌ನಲ್ಲಿ ಬಂದಿರುವ ದರಗಳು ಸಮಂಜಸವಾಗಿವೆಯೇ ಎಂಬುದರ ಬಗ್ಗೆ ತೀರ್ಮಾನ.

ಈ ಮೇಲಿನ ಅಂಶಗಳನ್ನು ಪರಿಗಣಿಸಿ ಪ್ರತಿಯೊಂದು ಟೆಂಡರ್ ಬಿಡ್‌ಗಳನ್ನು ಪ್ಯಾಕೇಜ್‌ವಾರು ಮೌಲ್ಯಮಾಪನ ಮಾಡಲಾಗಿದ್ದು, ವಿವರಗಳು ಕೆಳಕಂಡಂತಿವೆ.

1. **ಶ್ರೀ.ಮಂಜುನಾಥ್**: W-1 (64, 65) ಕ್ಕೆ ಎಲ್-1 ಟೆಂಡರ್‌ದಾರರಾಗಿರುತ್ತಾರೆ. ಇವರು ಮೌಲ್ಯಮಾಪನ ಮೊತ್ತಕ್ಕಿಂತ ಶೇಕಡ 28.23 ಕಡಿಮೆ ಮೊತ್ತವನ್ನು ನಮೂದಿಸಿರುತ್ತಾರೆ. ಬಿ.ಬಿ.ಎಂ.ಪಿ. ನಿಗದಿಪಡಿಸಿದ ಆಟೋ ಟಿಪ್ಪರ್‌ಗಿಂತ 13 ಆಟೋ ಟಿಪ್ಪರ್ ಕಡಿಮೆ ಮಾಡಿದ್ದು, 1 ಕಾಂಪ್ಯಾಕ್ಟರ್ ಕಡಿಮೆ ಮಾಡಿದ್ದು, 5 ಜನ ಹೆಚ್ಚುವರಿ ಪೌರಕಾರ್ಮಿಕರನ್ನು ನಮೂದಿಸಿರುತ್ತಾರೆ. ಸಿಬ್ಬಂದಿ ಮತ್ತು ವಾಹನಗಳ ಸಂಖ್ಯೆಗಳನ್ನು ನಮೂದಿಸಿರುತ್ತಾರೆ. ಹಾಗೂ 6 ಜನ ಟೆಂಡರ್‌ದಾರರಲ್ಲಿ ಇವರು ಎಲ್-1 ಟೆಂಡರ್‌ದಾರರಾಗಿದ್ದು, ಇವರ **ಟೆಂಡರ್‌ನ್ನು ಅಂಗೀಕರಿಸಬಹುದು**.

2. **ಶ್ರೀ.ಟಿ.ಶ್ರೀಧರ**: ಪ್ಯಾಕೇಜ್ W-6 (97, 98, 108) ಕ್ಕೆ ಎಲ್-1 ಟೆಂಡರ್‌ದಾರರಾಗಿರುತ್ತಾರೆ. ಇವರು ಮೌಲ್ಯಮಾಪನ ಮೊತ್ತಕ್ಕಿಂತ ಶೇಕಡ 15.79 ಕಡಿಮೆ ಮೊತ್ತವನ್ನು ನಮೂದಿಸಿರುತ್ತಾರೆ. ಬಿ.ಬಿ.ಎಂ.ಪಿ. ನಿಗದಿಪಡಿಸಿದಷ್ಟೇ ಲೆಕ್ಕಾಚಾರ ಮಾಡಿರುವ ಸಿಬ್ಬಂದಿ ಮತ್ತು ವಾಹನಗಳ ಸಂಖ್ಯೆಯಷ್ಟನ್ನೇ ನಮೂದಿಸಿದ್ದಾರೆ. 4 ಜನ ಟೆಂಡರ್‌ದಾರರಲ್ಲಿ ಎಲ್-1 ಟೆಂಡರ್‌ದಾರರಾಗಿದ್ದು ಇವರ **ಟೆಂಡರ್‌ನ್ನು ಅಂಗೀಕರಿಸಬಹುದು**.

3. **ಶ್ರೀ.ವೆಂಕಟರಮಣ (ವಿ.ಆರ್.ಎಂಟರ್ ಪ್ರೈಸಸ್)**: ಪ್ಯಾಕೇಜ್ W-7 (77, 94) ಕ್ಕೆ ಎಲ್-1 ಟೆಂಡರ್‌ದಾರರಾಗಿರುತ್ತಾರೆ. ಇವರು ಮೌಲ್ಯಮಾಪನ ಮೊತ್ತಕ್ಕಿಂತ ಶೇಕಡ 34.12 ಕಡಿಮೆ ಮೊತ್ತವನ್ನು ನಮೂದಿಸಿರುತ್ತಾರೆ. ಬಿ.ಬಿ.ಎಂ.ಪಿ. ನಿಗದಿಪಡಿಸಿದ ಆಟೋ ಟಿಪ್ಪರ್‌ಗಿಂತ 8 ಆಟೋ ಟಿಪ್ಪರ್ ಕಡಿಮೆ ಮಾಡಿದ್ದು, 21 ಜನ ಪೌರಕಾರ್ಮಿಕರನ್ನು ಕಡಿಮೆ ನಮೂದಿಸಿರುತ್ತಾರೆ. ಹಾಗೂ 2 ಜನ ಟೆಂಡರ್‌ದಾರರಲ್ಲಿ ಇವರು ಎಲ್-1 ಟೆಂಡರ್‌ದಾರರಾಗಿದ್ದು, ಇವರ **ಟೆಂಡರ್‌ನ್ನು ಅಂಗೀಕರಿಸಬಹುದು**.

4. **ಶ್ರೀ.ಸುರೇಶ್ ಚಂದ್ರನಾಥ್**: ಪ್ಯಾಕೇಜ್ W-10 (135, 136) ಕ್ಕೆ ಎಲ್-1 ಟೆಂಡರ್‌ದಾರರಾಗಿರುತ್ತಾರೆ. ಇವರು ಮೌಲ್ಯಮಾಪನ ಮೊತ್ತಕ್ಕಿಂತ ಶೇಕಡ 24.19 ರಷ್ಟು ಕಡಿಮೆ ಮೊತ್ತ ನಮೂದಿಸಿರುತ್ತಾರೆ. ಬಿ.ಬಿ.ಎಂ.ಪಿ. ನಿಗದಿಪಡಿಸಿದ ಆಟೋ ಟಿಪ್ಪರ್‌ಗಿಂತ 8 ಆಟೋ ಟಿಪ್ಪರ್ ಹೆಚ್ಚು ನಮೂದಿಸಿದ್ದು, 3 ಕಾಂಪ್ಯಾಕ್ಟರ್ ಕಡಿಮೆ ನಮೂದಿಸಿದ್ದು, 4 ಟಿಪ್ಪರ್ ಲಾರಿ ಕಡಿಮೆ ನಮೂದಿಸಿರುತ್ತಾರೆ. ಸಿಬ್ಬಂದಿ ಮತ್ತು ವಾಹನಗಳ ಸಂಖ್ಯೆಗಳನ್ನು ನಮೂದಿಸಿರುತ್ತಾರೆ. ಎಲ್-1 ಟೆಂಡರ್‌ದಾರರಾಗಿದ್ದು, ಇವರ **ಟೆಂಡರ್‌ನ್ನು ಅಂಗೀಕರಿಸಬಹುದು**.

5. **ಶ್ರೀ.ಗೌತಮ್ ರಾಜು**: ಪ್ಯಾಕೇಜ್ W-12 (139) ಕ್ಕೆ ಎಲ್-1 ಟೆಂಡರ್‌ದಾರರಾಗಿರುತ್ತಾರೆ. ಇವರು ಮೌಲ್ಯಮಾಪನ ಮೊತ್ತಕ್ಕಿಂತ ಶೇಕಡ 13.61 ರಷ್ಟು ಕಡಿಮೆ ಮೊತ್ತ ನಮೂದಿಸಿರುತ್ತಾರೆ. ಬಿ.ಬಿ.ಎಂ.ಪಿ. ಯು ಲೆಕ್ಕಾಚಾರ ಮಾಡಿರುವ ಸಿಬ್ಬಂದಿ ಮತ್ತು ವಾಹನಗಳನ್ನು ನಮೂದಿಸಿರುತ್ತಾರೆ. ಎಲ್-1 ಟೆಂಡರ್‌ದಾರರಾಗಿದ್ದು, ಇವರ **ಟೆಂಡರ್‌ನ್ನು ಅಂಗೀಕರಿಸಬಹುದು**.

S. Venkatesh B.E.
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

**ಮೇಲ್ಕಂಡ ಎಲ್ಲಾ ಅಂಶಗಳನ್ನು ಸ್ಥಾಯಿ ಸಮಿತಿಯ ಮುಂದೆ ತರುತ್ತಾ ಕೆಳಕಂಡ ಅಂಶಗಳ ಬಗ್ಗೆ ತೀರ್ಮಾನಕ್ಕೆ ಸಲ್ಲಿಸಿದೆ**

1. ಪ್ಯಾಕೇಜ್ ಸಂಖ್ಯೆ: 1, 6, 7, 10 ಮತ್ತು 12ರ ಎಲ್-1 ಟೆಂಡರ್‌ದಾರರ ದರಗಳನ್ನು ಒಪ್ಪಬಹುದಾಗಿದೆ. ಹಾಗೂ ಈಗ ಟೆಂಡರ್ ಕರೆದಿರುವ 5 ಪ್ಯಾಕೇಜ್‌ಗಳಿಗೆ ಎಲ್-1 ಬಿಡ್‌ದಾರರು ಸಲ್ಲಿಸಿರುವ ಮೊತ್ತ ತಿಂಗಳಿಗೆ ರೂ.1.14 ಕೋಟಿ ರೂ. ಗಳು ವೆಚ್ಚವಾಗಲಿದ್ದು,

ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

ಮುಂದೂಡಲಾಗಿದೆ.

**6. ವಿಷಯದ ಸಂಖ್ಯೆ: ಸಾಆಸ್ಥಾಸ/67/2012-13:**

ಆಯುಕ್ತರು ರವರ ದಿನಾಂಕ: 04-12-2012 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಾಸರಹಳ್ಳಿ ವಲಯ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಸ್ತುಗಳ ವಿಲೇವಾರಿಗಾಗಿ ಮಾನ್ಯ ಆಯುಕ್ತರ ಆದೇಶದ ಸಂಖ್ಯೆ ಆ/ಪಿಎಸ್ಆರ್/(4) 7985/2012-13, ದಿನಾಂಕ: 03-11-2012 ರಂತೆ ಒಟ್ಟು 01 ಪ್ಯಾಕೇಜ್‌ಗೆ (ಡಿ-3) ಟೆಂಡರ್ ಸಂಖ್ಯೆ: BBMP/EE/DD/E-PMT-T-06/2012-13/D3, Dated: 03-11-2012 ರಲ್ಲಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಸದರಿ ಟೆಂಡರ್‌ಗಳ ತಾಂತ್ರಿಕ ಬಿಡ್‌ಗಳನ್ನು ದಿನಾಂಕ: 15-11-2012 ರಂದು ಟೆಂಡರ್‌ಗಳ ತಾಂತ್ರಿಕ ಬಿಡ್‌ಗಳನ್ನು ತೆರೆಯಲಾಗಿದ್ದು, ಕೆಳಕಂಡ ಬಿಡ್ಡ್‌ದಾರರು ಭಾಗವಹಿಸಿರುತ್ತಾರೆ.

| ಕ್ರಮ ಸಂಖ್ಯೆ | ಪ್ಯಾಕೇಜ್ ಸಂಖ್ಯೆ | ವಾರ್ಡ್ ಸಂಖ್ಯೆ ಮತ್ತು ಉಪವಿಭಾಗ | ಭಾಗವಹಿಸಿದ ಬಿಡ್ಡ್‌ದಾರರ ಹೆಸರು | ಷರಾ |
|---|---|---|---|---|
| 1 | ಡಿ-3 | 39 (ಚೊಕ್ಕಸಂದ್ರ) ಮತ್ತು 41 (ಪೀಣ್ಯ ಕೈಗಾರಿಕಾ ಪ್ರದೇಶ), ಪೀಣ್ಯ ಕೈಗಾರಿಕಾ ಪ್ರದೇಶ ಉಪವಿಭಾಗ | 1. A.V. Girisha | |
| | | | 2. C.Manjunath | |
| | | | 3. H.Narasegowda | |
| | | | 4. M. Suresha (Care Point) | |
| | | | 5. M. Suresha (Sri Manjunatha Enterprises) | |
| | | | 6. Narendra S.D. | |
| | | | 7. R. Gurumurthy | |
| | | | 8. R. Sathisha | |
| | | | 9. Vajrappa | |
| | | | 10. Venkataramana S. | |

ಮಾನ್ಯ ಆಯುಕ್ತರ ಕಛೇರಿ ಆದೇಶದ ಸಂಖ್ಯೆ: ಆಯುಕ್ತರು/ಪಿಎಸ್ಆರ್/(4)6928/2012-13, ದಿನಾಂಕ: 29-09-2012 ರಂತೆ ಟೆಂಡರ್ ಮೌಲ್ಯಮಾಪನ ಸಮಿತಿ ರಚಿಸಲಾಗಿದ್ದು, ಅಪರ ಆಯುಕ್ತರು ರವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಅಧಿಕಾರಿಗಳನ್ನು ಸಮಿತಿಯ ಸದಸ್ಯರುಗಳನ್ನಾಗಿ ನೇಮಿಸಲಾಗಿದೆ.

1. ಮುಖ್ಯ ಅಭಿಯಂತರರು.
2. ಅಧೀಕ್ಷಕ ಅಭಿಯಂತರರು.
3. ಕಾರ್ಯಪಾಲಕ ಅಭಿಯಂತರರು (ಯೋಜನೆ).
4. ಸಹಾಯಕ ನಿಯಂತ್ರಕರು (ಹಣಕಾಸು)

S. Venkatesh Babu

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ದಿನಾಂಕ: 21-11-2012 ರಂದು ಮೌಲ್ಯಮಾಪನ ಸಭೆಯಲ್ಲಿ ಈ ಟೆಂಡರ್‌ಗಳ ತಾಂತ್ರಿಕ ಮೌಲ್ಯಮಾಪನ ಮಾಡಲಾಗಿದೆ. ಈ ಟೆಂಡರ್‌ಗಳ ತಾಂತ್ರಿಕ ಮೌಲ್ಯಮಾಪನ ನಂತರ ಬಿಡ್ ಸ್ವೀಕೃತಿಯಾಗಿರುವ ಡಿ3 ಪ್ಯಾಕೇಜ್‌ನಲ್ಲಿ ಭಾಗವಹಿಸಿರುವ 10 ಬಿಡ್ಡುದಾರರ ಪೈಕಿ 9 ಬಿಡ್ಡುದಾರರು ತಾಂತ್ರಿಕ ಅರ್ಹರಾಗಿದ್ದಾರೆಂದು ಟೆಂಡರ್ ಮೌಲ್ಯಮಾಪನ ಸಮಿತಿಯು ತೀರ್ಮಾನ ಕೈಗೊಂಡಿರುತ್ತದೆ. (ಟೆಂಡರ್ ಮೌಲ್ಯಮಾಪನ ಸಮಿತಿಯ ತಾಂತ್ರಿಕ ವರದಿಯ ಪ್ರತಿಯನ್ನು ಲಗತ್ತಿಸಿದೆ).

ಮುಂದುವರಿದಂತೆ, ತಾಂತ್ರಿಕವಾಗಿ ಅರ್ಹರಾಗಿರುವ ಬಿಡ್ಡುದಾರರುಗಳು ಪ್ಯಾಕೇಜ್‌ಗಳನ್ನು ಟೆಂಡರ್ ಮೌಲ್ಯಮಾಪನ ಸಮಿತಿ ತೀರ್ಮಾನದಂತೆ ಬಿಡ್‌ದಾರರ ಆರ್ಥಿಕ ಬಿಡ್ಡನ್ನು ದಿನಾಂಕ: 22-11-2012 ರಂದು ತೆರೆಯಲಾಗಿರುತ್ತದೆ ಮತ್ತು ಅವುಗಳ ವಿವರ ಈ ಕೆಳಕಂಡಂತಿದೆ.

| ಕ್ರ. ಸಂ. | ಪ್ಯಾಕೇಜ್ ಸಂಖ್ಯೆ | ವಾರ್ಡ್ ಸಂಖ್ಯೆ ಮತ್ತು ಉಪವಿಭಾಗ | ತಾಂತ್ರಿಕ ಮೌಲ್ಯಮಾಪನದಲ್ಲಿ ಅರ್ಹರಾದ (**L1 & L2**) ಬಿಡ್ಡದಾರರ ಹೆಸರು | ಮೌಲ್ಯಮಾಪನದ ಮೊತ್ತ/ ತಿಂಗಳಿಗೆ (ರೂ. ಲಕ್ಷಗಳು) | ಬಿಡ್ಡುದಾರರು ನಮೂದಿಸಿರುವ ಮೊತ್ತ/ತಿಂಗಳಿಗೆ (ರೂ. ಲಕ್ಷಗಳು) | ವ್ಯತ್ಯಾಸದ ಮೊತ್ತ/ತಿಂಗಳಿಗೆ (ರೂ. ಲಕ್ಷಗಳು) | ಶೇಕಡವಾರು |
|---|---|---|---|---|---|---|---|
| 1 | ಡಿ-3 | 39 (ಚೊಕ್ಕಸಂದ್ರ) ಮತ್ತು 41 (ಪೀಣ್ಯ ಕೈಗಾರಿಕಾ ಪ್ರದೇಶ), ಪೀಣ್ಯ ಕೈಗಾರಿಕಾ ಪ್ರದೇಶ ಉಪವಿಭಾಗ) | 1. C. Manjunath | 35.56 | 18.89 | 16.67 | 46.87% (ಕಡಿಮೆ) |
| | | | 2. M.Suresha (Care Point) | | 22.86 | 12.7 | 35.71% (ಕಡಿಮೆ) |

ಪ್ಯಾಕೇಜ್ ಸಂಖ್ಯೆ.ಡಿ-3 ಗೆ **L1** ಬಿಡ್ಡುದಾರರು ಕೋಟ್ ಮಾಡಿರುವ ದರವು ಮೌಲ್ಯಮಾಪನ ದರಕ್ಕಿಂತ 46.87% ಕಡಿಮೆ ಇರುತ್ತದೆ.

ಈ ಬಿಡ್ಡ್‌ಗಳನ್ನು ಒಪ್ಪುವ ಅಥವಾ ತಿರಸ್ಕರಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ವಿಷಯವನ್ನು ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಅನುಮೋದನೆ ಕೋರಿ ಮಂಡಿಸಿದೆ.

**ನಿರ್ಣಯ:**

ಮುಂದೂಡಲಾಗಿದೆ.

**(ಎಸ್.ವೆಂಕಟೇಶ್ ಬಾಬು)**
**ಅಧ್ಯಕ್ಷರು**
**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.**